**ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ**

**ದಿಃ 20.11.2025**

**ಪಾಟೀ ಸವಾಲುಃ ವಾದಿ ಪರ ಪರ ಶ್ರೀ ಡಿ ಪಿ ಎಲ್ ವಕೀಲರಿಂದ**

ನಾನು ಲಕ್ಕಿಕುಪ್ಪೆ ಬಿಟ್ಟು ಕೂಡಿಗೆಗೆ ಬರುವ ತನಕ ನನ್ನ ಅಣ್ಣತಮ್ಮದಿರೊಂದಿಗೆ ಒಟ್ಟಿಗೆ ವಾಸವಿರುತ್ತೇನೆ ಎಂದರೆ ಸರಿ . ನನ್ನ ಮದುವೆ ಒಟ್ಟು ಕುಟುಂಬದಲ್ಲಿರುವಾಗ ಆಗಿತ್ತೋ ಇಲ್ಲಮೋ ಎಂದರೆ ಸಾಕ್ಷಿಯು ಒಟ್ಟು ಕುಟುಂಬದಲ್ಲಿದ್ದಾಗ ಮದುವೆ ಆಗಿಲ್ಲ ಎಂದು ನುಡಿದರು. ನನ್ನ ಪಿತ್ರಾರ್ಜಿತ ಆಸ್ತಿಯನ್ನು ಮಾರಾಟ ಮಾಡಿದ ಕ್ರಯ ಪತ್ರ ನ್ಯಾಯಾಲಯಕ್ಕೆ ಸಲ್ಲಿಸಿದ್ದೀರಾ ಎಂದರೆ ಸಾಕ್ಷಿಯು ಪಿತ್ರಾರ್ಜಿತ ಆಸ್ತಿಯನ್ನು ನನ್ನ ತಂದೆ ಕೊಟ್ಟ ಆಸ್ತಿ ಮತ್ತು ಅದರ ಕ್ರಯ ಪತ್ರವನ್ನು ಹಾಜರುಪಡಿಸಿರುವುದಿಲ್ಲ ಎಂದು ನುಡಿದರು. ನಾನು ಮಾರಾಟ ಮಾಡಿ ಆಸ್ತಿ ನನ್ನ ತಂದೆ ಸ್ವಂತವಾಗಿ ಖರೀದಿಸಿದ್ದರು. ಸದರಿ ಕ್ರಯ ಪತ್ರವನ್ನು ನಾನು ನೋಡಿರುತ್ತೇನೆ. ಸದರಿ ಕ್ರಯ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೆ ತೊಂದರೆ ಇರುವುದಿಲ್ಲ. ನಾನು 1970 ನೆ ಇಸವಿಯಲ್ಲಿ ಲಕ್ಕಿಕುಪ್ಪೆಗೆ ಬಂದಿದ್ದು 1978 ರಲ್ಲಿ ಮದುವೆಯಾಗಿರುತ್ತೇನೆ.

ಲಕ್ಕಿಕುಪ್ಪೆಯಲ್ಲಿ ಇರುವ ಜಮೀನನ್ನು 2004 ರಲ್ಲಿ ಮಾರಾಟ ಮಾಡಿರುತ್ತೇನೆ. ಅಲ್ಲಿ ತನಕ ಅದರಲ್ಲಿ ಬರುವಂತಹ ಆದಾಯವಾನ್ನು ನಾನೇ ಅನುಭವಿಸುತ್ತಿದ್ದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನ್ನ ತಂದೆ ಅನುಭವಿಸುತ್ತಿದ್ದರು ಎಂದು ನುಡಿದರು. ನನ್ನ ತಂದೆ 2004 ನೆ ಇಸವಿಯಲ್ಲಿ ಮರಣ ಹೊಂದಿರುತ್ತಾರೆ. ಲಕ್ಕಿಕುಪ್ಪೆಯಲ್ಲಿ ಇರುವ ಸ್ವತ್ತಿನಿಂದ ಬಂದ ಆದಾಯವನ್ನು ನಾನೇ

ಅನುಭವಿಸುತ್ತಿದ್ದೆ ಎಂದರೆ ಸರಿಯಲ್ಲ. ಲಕ್ಕಿಕುಪ್ಪೆಯಲ್ಲಿರುವ ಸ್ವತ್ತನ್ನು ತಮ್ಮನಾದ ತಮ್ಮೇಗೌಡರಿಗೆ ಮಾರಾಟ ಮಾಡಿರುತ್ತೇನೆ. ನನ್ನ ತಮ್ಮನಿಗೆ ನನ್ನ ಹೆಂಡತಿಯ ತಂಗಿಯನ್ನು ಕೊಟ್ಟು ಮದುವೆ ಮಾಡಿರುತ್ತೇವೆ ಎಂದರೆ ಸರಿ . ನಾನು ಕೂಡಿಗೆಯಲ್ಲಿ ಮೊದಲ ಬಾರಿಗೆ 1983 ರಲ್ಲಿ ಸರ್ವೆ ನಂ 7/1ಬಿ ವಿಸ್ತೀರ್ಣ 1 ಎಕರೆ 25 ಸೆಂಟ್ ಸ್ವತ್ತನ್ನು ಖರೀದಿ ಮಾಡಿರುತ್ತೇನೆ. ಸದರಿ ಜಮೀನು ನನ್ನ ಹೆಂಡತಿಯ ಹೆಸರಿನಲ್ಲಿರುತ್ತದೆ. ದಿಃ 24.11.1995 ರಲ್ಲಿ ಸರ್ವೆ ನಂ 24/1 ರಲ್ಲಿ ವಿಸ್ತೀರ್ಣ 5 ಸೆಂಟ್ಸ ಸ್ವತ್ತನ್ನು ಖರೀದಿ ಮಾಡಿರುತ್ತೇನೆ. ಇದರ ಬಗ್ಗೆ ನಾನು ಯಾವುದೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ. ನಾನು ಮೇಲೆ ತಿಳಿಸಿದ ಸ್ವತ್ತುಗಳನ್ನು ಪಿತ್ರಾರ್ಜಿತ ಆಸ್ತಿಯಿಂದ ಬಂದ ಆದಾಯದಿಂದ ಖರೀದಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ನಾನು ನನ್ನ ಮಗನಿಗೆ 15 ವರ್ಷಗಳ ಹಿಂದೆ ಮದುವೆ ಮಾಡಿರುತ್ತೇನೆ. ನನ್ನ ಮಗನಿಗೆ 2009 ಇಸವಿಯಲ್ಲಿ ಮದುವೆ ಮಾಡಿರುತ್ತೇನೆ ಎಂದರೆ ಸರಿ . ನನ್ನ ಮಗನ ಮದುವೆ ಮಾಡಬೇಕಾದರೆ ನಾನು ನನ್ನ ಮಕ್ಕಳು ಒಟ್ಟು ಕುಟುಂಬದಲ್ಲಿ ಇದ್ದವು ಎಂದರೆ ಸರಿ . ನನ್ನ ಮಗನ ಮದುವೆ ಮಾತುಕತೆಯಲ್ಲಿ ಹುಡುಗಿಯ ಮನೆ ಕಡೆಯವರು ಏನು ಕೊಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಮಗನಿಗೆ ಮದುವೆಯ ಸಂದರ್ಭದಲ್ಲಿ ಏನು ಕೊಟಿರುತ್ತಾರೆ ಎಂದು ಅವನಿಗೆ ಗೊತ್ತಾ ಎಂದರೆ ಸಾಕ್ಷಿಯು ಅದು ನಾನು ಹೇಳಲು ಬರುವುದಿಲ್ಲ ಎಂದು ನುಡಿದರು. ನನ್ನ ಮಗನ ಮದುವೆಯನ್ನು ನಾವು ಎಲ್ಲಾರೂ ಸೇರಿ ಮಾಡಿರುತ್ತೇವೆ ಎಂದರೆ ಸರಿ . ಮದುವೆಯ ಸಂದರ್ಭದಲ್ಲಿ ವಾದಿಯರ ತಾಯಿ ಹುಡುಗನಿಗೆ 200 ಗ್ರಾಂ ಚಿನ್ನ ಮತ್ತು ರೂ 3 ಲಕ್ಷ ನಗದು ಕೊಟ್ಟಿರುತ್ತಾರೆ ಎಂದರೆ ನನಗೆ

ಗೊತ್ತಿಲ್ಲ. ನನ್ನ ಮಗ ಕೂಲಿ ಕೆಲಸ ಮಾಡುತ್ತಾನೆ. ನನ್ನ ಮಗ ಖರೀದಿ ಮಾಡಿದ ಜಮೀನಿಗೆ ಯಾರು ದುಡ್ಡು ಕೊಟ್ಟರು ಎಂದು ನನಗೆ ಗೊತ್ತಿಲ್ಲ. ನನ್ನ ಮಗ ಯಾವ ಯಾವ ಜಮೀನನ್ನು ಖರೀದಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

ನನ್ನ ಮಗ ಖರೀದಿ ಮಾಡಿದ ಜಮೀನನ್ನು ಅವನ ತಂಗಿಯಾದ ಹೇಮ ಮತ್ತು ನೇತ್ರಾವತಿ ಮಾರಾಟ ಮಾಡಿದ್ದಾನೆ ಎಂದು ನನಗೆ ತಿಳಿದಿದೆ. ನನ್ನ ಮಗ ವಾದಿ ಮನೆಯವರು ಕೊಟ್ಟ ಹಣದಿಂದ ಮತ್ತು ಒಟ್ಟು ಕುಟುಂಬದ ಆದಾಯದಿಂದ ಖರೀದಿ ಮಾಡಿದ ಆಸ್ತಿ ಎಂದರೆ ಸರಿಯಲ್ಲ. ನನ್ನ ಮಗ ವಾದಿ ಮನೆಯವರು ಕೊಟ್ಟ ಚಿನ್ನವನ್ನು ವಾಪಸ್ಸು ಕೊಟ್ಟಿರುವುದಿಲ್ಲ ಎಂದರೆ ಸಾಕ್ಷಿಯು ಕೊಡುವಾಗ ನನಗೆ ಗೊತ್ತಿರುವುದಿಲ್ಲ ಈಗಲೂ ನನಗೆ ಗೊತ್ತಿಲ್ಲ ಎಂದು ನುಡಿದರು. ಚಿಕ್ಕತ್ತೂರಿಗೆ ಬಂದಾಗ ನಾನು ನನ್ನ ಹೆಂಡತಿ ಮತ್ತು ಮಕ್ಕಳನ್ನು ಸಾಕಲು ಸಾಧ್ಯವಾಗುತ್ತಿರಲಿಲ್ಲ ಎಂದರೆ ಸಾಕ್ಷಿಯು ನನ್ನ ಸಂಬಳದಿಂದ ಕುಟುಂಬ ನಿರ್ವಹಣೆ ಮಾಡಲು ಕಷ್ಟವಾಗಿದ್ದು ನನ್ನ ಸ್ವಂತ ಸಂಬಳದಿಂದ ಹೆಂಡತಿಗೆ ನಾನು ಮಿಲ್ ಇಟ್ಟುಕೊಟ್ಟಿರುತ್ತೇನೆ ಎಂದು ನುಡಿದರು. ಲಕ್ಕಿಕುಪ್ಪೆಯಲ್ಲಿರುವ ಜಮೀನಿನಿಂದ ಬಂದ ಆದಾಯದಲ್ಲಿ ನಾನು ಚಿಕ್ಕತ್ತೂರಿನಲ್ಲಿ ಸುಗಮವಾಗಿ ಸಂಸಾರವನ್ನು ನಿರ್ವಹಣೆ ಮಾಡುತ್ತಿದ್ದೆ ಮತ್ತು ಅದೆ ಆದಾಯದಲ್ಲಿ ಮಿಲ್ ಮತ್ತು ಅಂಗಡಿಯನ್ನು ಇಟ್ಟುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

ನಾನು 2020 ನೆ ಸಾಲಿನಲ್ಲಿ ಮಿಲ್ ನ್ನು ಮಾರಾಟ ಮಾಡಿರುತ್ತೇನೆ. ನನ್ನ ಹೆಣ್ಣುಮಕ್ಕಳು ಮತ್ತು ಮಗನನ್ನು ಓದಿಸಲು ತುಂಬಾ ಕಷ್ಟ ಇತ್ತು ಎಂದರೆ ಸರಿ . ನನ್ನ

ಮಗಳು ನೇತ್ರಾವತಿ ಮದುವೆ 2005 ನೆ ಸಾಲಿನಲ್ಲಿ ಆಗಿರುತ್ತದೆ. ನನ್ನ ಮಗಳ ಹೇಮಾವತಿ ಮದುವೆಯನ್ನು 1995 ನೆ ಸಾಲಿನಲ್ಲಿ ಮಾಡಿರುತ್ತೇನೆ. ನನ್ನ ಮಗಳ ಹೇಮಾವತಿ ರವರ ಮದುವೆಯನ್ನು ರೂ 50 ಸಾವಿರ ಹಣವನ್ನು ಖರ್ಚು ಮಾಡಿ ಮಾಡಿರುತ್ತೇನೆ. ನನ್ನ ಇನ್ನೊಬ್ಬ ಮಗಳ ನೇತ್ರಾವತಿ ಮದುವೆಯನ್ನು ರೂ 1 ಲಕ್ಷ ಖರ್ಚು ಮಾಡಿ ಮಾಡಿರುತ್ತೇನೆ. ನನ್ನ ಮಗಳ ನೇತ್ರಾವತಿ ಮದುವೆ ಮಾಡಬೇಕಾದರೆ 25 ಗ್ರಾಂ ಚಿನ್ನವನ್ನು ನೀಡಿರುತ್ತೇನೆ. ನನ್ನ ಮಗನ ಮದುವೆಯನ್ನು ರೂ 1 ಲಕ್ಷ ಹಣವನ್ನು ಖರ್ಚು ಮಾಡಿ ಮಾಡಿರುತ್ತೇನೆ. ನಾನು ನನ್ನ ನಿವೃತ್ತಿ ಹಣವನ್ನು ನನ್ನ ಮಗಳ ಮದುವೆಗೆ ಹಾಕಿ ಖರ್ಚು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ನನ್ನ ನಿವೃತ್ತಿ ಹಣದಿಂದ ಕೆಲವು ಆಸ್ತಿಗಳನ್ನು ಖರೀದಿ ಮಾಡಿರುತ್ತೇನೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನನ್ನ ಮಗ ನನ್ನ ಹೆಣ್ಣುಮಕ್ಕಳಿಗೆ ಆಸ್ತಿಯನ್ನು ಮಾಡಿರುವುದು ಸುಳ್ಳು ಎಂದರೆ ಸರಿಯಲ್ಲ.

ನಾನು ನನ್ನ ಮೊಮ್ಮಕ್ಕಳಿಗೆ ಭಾಗ ಕೊಡಬೇಕು ಎಂಬ ಉದ್ದೇಶದಿಂದ ವಾದಿಗಳ ತಾಯಿ ಮನೆಯಿಂದ ಹೋದ ಮೇಲೆ ಸುಳ್ಳು ಕ್ರಯ ಪತ್ರಗಳನ್ನು ನಮ್ಮ ಕುಟುಂಬದಲ್ಲಿ ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಮಗ ಖರೀದಿ ಎಲ್ಲಾ ಆಸ್ತಿಯು ಪಿತ್ರಾರ್ಜಿತ ಸ್ವತ್ತಿನ ಆದಾಯದಿಂದ ಖರೀದಿ ಮಾಡಿದ್ದು ಎಂದರೆ ಸರಿಯಲ್ಲ. ವಾದಿಗಳಿಗೆ ಭಾಗ ಕೊಡಬೇಕಾಗುತ್ತದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/-

ಪ್ರ ದ ನ್ಯಾದಂ, ಕುಶಾಲನಗರ